ಚಿತ್ರದುರ್ಗ ತಾಲ್ಲೂಕಿನ ಬೆಳಗಟ್ಟ ಗ್ರಾಮದ ಸುತ್ತಮುತ್ತ 6 ಕಿ.ಮೀ. ವ್ಯಾಪ್ತಿಯಲ್ಲಿ ಸುಮಾರು 5 ಪ್ರೌಢ ಶಾಲೆಗಳಿದ್ದು 280ಕ್ಕೂ ಹೆಚ್ಚು ವಿದ್ಯಾರ್ಥಿಗಳು ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ವ್ಯಾಸಂಗ ಮಾಡುತ್ತಿರುವುದರಿಂದ ಬೆಳ್ಳಗಟ್ಟ ಗ್ರಾಮಕ್ಕೆ ಅವಶ್ಯವಾಗಿ ಸರ್ಕಾರಿ ಪದವಿಪೂರ್ವ ಕಾಲೇಜು ಮಂಜೂರು ಮಾಡುವ ಬಗ್ಗೆ ಇಲಾಖೆಯಿಂದ ವರದಿ ಮಾಡಲಾಗಿತ್ತು. ಇದಕ್ಕೆ ಪೂರಕವಾಗಿ ಸರ್ಕಾರಿ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಲು ಸ್ಥಳೀಯರಾದ ಶ್ರೀ ಭೀಮಾರೆಡ್ಡಿ ಇವರು ಜಮೀನನ್ನು ದಾನವಾಗಿ ನೀಡಿರುತ್ತಾರೆ.

ಕಾರ್ಯಭಾರ ಕಡಿಮೆ ಇರುವ/ಇಲ್ಲದಿರುವ ಉಪನ್ಯಾಸಕರನ್ನು ನಿಯೋಜಿಸಿ, ಚಿತ್ರದುರ್ಗದ ಬೆಳ್ಳಗಟ್ಟ ಗ್ರಾಮಕ್ಕೆ ಸರ್ಕಾರಿ ಪದವಿಪೂರ್ವ ಕಾಲೇಜನ್ನು ಹೊಸದಾಗಿ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಟಿ. ರಘುಮೂರ್ತಿ: ಉತ್ತರದಲ್ಲಿ ಪರಿಶೀಲಿಸಲಾಗುತ್ತದೆ ಎನ್ನುತ್ತಾರೆ. ಖಂಡಿತವಾಗಿಯೂ ಅದನ್ನು ಮಾಡಲೇಬೇಕು. ಏಕೆಂದರೆ, 2 ವರ್ಷದಲ್ಲಿ ತೊಂದರೆಯಾಗಿದೆ. Admission ಆಗುವ ಸಮಯದಲ್ಲಿ ಅದು ನಿಂತಿರುವುದು, ಅದಕ್ಕೋಸ್ಕರ ಮಂಜೂರು ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಮಾನ್ಯ ಸಹಕಾರ ಸಚಿವರು) (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ): ಇದನ್ನು ಶಿಕ್ಷಣ ಸಚಿವರ ಗಮನಕ್ಕೆ ತಂದು ಆದಷ್ಟು ಬೇಗ ಮಂಜೂರು ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು, ಮಂಜೂರು ಮಾಡಿಸೋಣ.

ಶ್ರೀ ಟಿ. ರಘುಮೂರ್ತಿ: ಮಂತ್ರಿಗಳ ಗಮನದಲ್ಲಿದೆ.

ಅಧ್ಯಕ್ಷರು: ಮಾನಪ್ಪ ವಜ್ಜಲರವರು, ಇಲ್ಲ.

ವಿಷಯ: ತಾಲ್ಲೂಕು ರಚನೆಯ ಸಂದರ್ಭದಲ್ಲಿ ದಾವಣಗೆರೆ ಜಿಲ್ಲೆಯ ಮಾಯಕೊಂಡ ಪಟ್ಟಣವನ್ನು ತಾಲ್ಲೂಕು ಎಂದು ಪರಿಗಣಿಸುವ ಬಗ್ಗೆ.

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ): ಮಾನ್ಯ ಅಧ್ಯಕ್ಷರೆ, ತಾಲ್ಲೂಕು ರಚನೆಯ ಸಂದರ್ಭದಲ್ಲಿ ದಾವಣಗೆರೆ ಜಿಲ್ಲೆಯ ಮಾಯಕೊಂಡ ಪಟ್ಟಣವನ್ನು ತಾಲ್ಲೂಕು ಎಂದು ಪರಿಗಣಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಪರಿಣಾಮಕಾರಿಯಾದ ಸಮರ್ಥವಾದ ಆಡಳಿತ ನೀಡುವ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸೇವೆಗಳನ್ನು ನೀಡುವ ಉದ್ದೇಶದಿಂದ ಈಗ ಅಸ್ತಿತ್ವದಲ್ಲಿರುವ ತಾಲ್ಲೂಕುಗಳನ್ನು ಪುನರ್ ರಚನೆ ಮಾಡುವ ಸಂಬಂಧ ಅಧ್ಯಯನ ನಡೆಸಿ ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ನೀಡುವ ಸಲುವಾಗಿ 1973ರಲ್ಲಿ ಶ್ರೀ ವಾಸುದೇವರಾವ್ ಆಯೋಗ, 1984ರಲ್ಲಿ ಶ್ರೀ ಟಿ.ಎಂ. ಹುಂಡೇಕರ್ ಸಮಿತಿ, ಹಾಗೂ 1986ರಲ್ಲಿ ಶ್ರೀ ಪಿ.ಸಿ. ಗದ್ದಿಗೌಡರ್ ಈ ಸಮಿತಿಗಳನ್ನು ರಚಿಸಲಾಗಿತ್ತು. ಈ ಸಮಿತಿಗಳು ಕ್ರಮವಾಗಿ 18, 27 ಮತ್ತು 30 ಹೊಸ ತಾಲ್ಲೂಕುಗಳನ್ನು ರಚಿಸಲು ಶಿಫಾರಸ್ಸು ಮಾಡಿರುತ್ತವೆ.

ಶ್ರೀ ಎಂ.ಬಿ. ಪ್ರಕಾಶ್, ಇವರ ಅಧ್ಯಕ್ಷತೆಯಲ್ಲಿ 2007ರಲ್ಲಿ ತಾಲ್ಲೂಕು ಪುನರ್ ರಚನಾ ಸಮಿತಿ ರಚಿಸಲಾಗಿತ್ತು. ಈ ಸಮಿತಿಯು ಅಧ್ಯಯನ ನಡೆಸಿ, ದಿನಾಂಕ 30.05.2009 ರಂದು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಈ ಸಮಿತಿಯ ವರದಿಯಲ್ಲಿ 32 ಹೊಸ ಗ್ರಾಮಾಂತರ ತಾಲ್ಲೂಕುಗಳನ್ನು ಹಾಗೂ 11 ನಗರ ತಾಲ್ಲೂಕುಗಳನ್ನು ಅಂದರೆ ಒಟ್ಟು 43 ತಾಲ್ಲೂಕುಗಳನ್ನು ರಚನೆ ಮಾಡಲು ಶಿಫಾರಸ್ಸು ಮಾಡಿರುತ್ತದೆ.

ಸರ್ಕಾರದಿಂದ ದಿನಾಂಕ 08.02.2013ರಂದು ಮಂಡಿಸಿದ 2013–14ನೇ ಸಾಲಿನ ಆಯವ್ಯಯದಲ್ಲಿ ಯಾವುದೇ ಅನುದಾನ ಅವಕಾಶ ಮಾಡಿಕೊಳ್ಳದೇ ಹೊಸದಾಗಿ 43 ತಾಲ್ಲೂಕುಗಳನ್ನು ರಚಿಸುವುದಾಗಿ ಘೋಷಿಸಲಾಗಿರುತ್ತದೆ. ಈ ಘೋಷಣೆ ಮಾಡಿದ 43 ಹೊಸ ತಾಲ್ಲೂಕುಗಳಲ್ಲಿ ಯಾವುದೇ ಸಮಿತಿಯ ಶಿಫಾರಸ್ಸು ಇಲ್ಲದೇ 1) ಕಾಗವಾಡ 2) ನ್ಯಾಮತಿ

3) ಕಂಪ್ಲಿ 4) ಅಣ್ಣಿಗೇರಿ ಮತ್ತು 5) ಅಳ್ನಾವರ ಈ ಪ್ರದೇಶಗಳು ಸೇರಿರುತ್ತವೆ. 2014–15ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದ 43 ತಾಲ್ಲೂಕುಗಳ ರಚನೆಯನ್ನು ಜಾರಿಗೆ ತರಲು 2014–15 ಮತ್ತು 2015–16ನೇ ಸಾಲಿನ ಆಯವ್ಯಯದಲ್ಲಿ ಯಾವುದೇ ಅನುದಾನವನ್ನು ನಿಗದಿಪಡಿಸಿರುವುದಿಲ್ಲ.

ಇತ್ತೀಚಿನ ಒಂದು ಅಂದಾಜಿನ ಪ್ರಕಾರ ಹೊಸ ತಾಲ್ಲೂಕಿನ ರಚನೆಗೆ, ಸಿಬ್ಬಂದಿ ವರ್ಗದ ವೇತನ ಕಛೇರಿ ವಾಹನ/ಪಿಠೋಪಕರಣಗಳು, ಕಛೇರಿ ಕಟ್ಟಡಗಳ ವೆಚ್ಚ ಮತ್ತು ಸಿಬ್ಬಂದಿ ವರ್ಗದವರಿಗೆ ವಸತಿ ಗೃಹ ನಿರ್ಮಾಣದ ವೆಚ್ಚ ಇವೆಲ್ಲವೂ, ಸೇರಿದಂತೆ 25 ಕೋಟಿ ರೂ.ಗಳ ಮೊತ್ತವು ಬೇಕಾಗುತ್ತದೆ.

ಹೊಸ ತಾಲ್ಲೂಕುಗಳ ರಚನೆಯು ನಿರಂತರವಾದ ಬೇಡಿಕೆಯಾಗಿರುತ್ತದೆ. ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಈಗಾಗಲೇ ಘೋಷಿಸಿದ 43 ಹೊಸ ತಾಲ್ಲೂಕುಗಳ ರಚನೆಗೆ ಸರ್ಕಾರವು ಬದ್ಧವಾಗಿದ್ದು ಇದರ ಅನುಷ್ಠಾನಕ್ಕಾಗಿ ಪ್ರಥಮ ಆದ್ಯತೆ ನೀಡಬೇಕಾಗಿರುತ್ತದೆ. ತಾಲ್ಲೂಕು ರಚನೆಯ ಸಂಬಂಧ, ಹಾಲಿ ತಾಲ್ಲೂಕು/ಜಿಲ್ಲಾ ಕೇಂದ್ರಗಳಿಗೆ ಇರುವ ದೂರ ವಸ್ತು ಸ್ಥಿತಿ, ಜನಸಂಖ್ಯೆ, ಅಗತ್ಯ ಮೂಲ ಸೌಲಭ್ಯ ಮತ್ತು ಭೌಗೋಳಿಕ ವಿಸ್ತೀರ್ಣದಲ್ಲಿ ವ್ಯಾಪ್ತಿ ವಿಸ್ತಾರವಾಗಿರುವಂತಹ ಅನಿವಾರ್ಯತೆಗಳನ್ನು ಅವಲಂಬಿಸಿ ಹೊಸ ತಾಲೂಕುಗಳನ್ನು ರಚನೆ ಮಾಡುವ ಬಗ್ಗೆ ಇದುವರೆವಿಗೂ ಸಮಿತಿಗಳನ್ನು ರಚಿಸಿ ಸಮಿತಿಯು ನೀಡುವ ವರದಿಯನ್ನಾಧರಿಸಿ ನಿರ್ಣಯ ಕೈಗೊಳ್ಳುತ್ತಿದ್ದು ಅದರಂತೆ ಮಾಯಕೊಂಡ ಪಟ್ಟಣವನ್ನು ತಾಲೂಕು ಕೇಂದ್ರವನ್ನಾಗಿ ಘೋಷಿಸುವುದನ್ನು ಈ ಹಿನ್ನೆಲೆಯಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಶಿವಮೂರ್ತಿ: ಉತ್ತರ ನೀಡಿದ್ದಾರೆ, ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ವಾಸ್ತವಿಕವಾಗಿ ಕಂದಾಯ ಮಂತ್ರಿಗಳಿಗೆ ಬರುತ್ತದೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್: ನನ್ನ ಗಮನಕ್ಕೆ ಬಂದಿರುವುದರಿಂದ, ಇಲ್ಲಿ ನಾನೇ statement ಮಾಡಿರುವುದರಿಂದ, ಈ ಹೊಸ ತಾಲ್ಲೂಕುಗಳದು ನಿರಂತರ ಬೇಡಿಕೆಯಾಗಿದೆ. ಈಗಾಗಲೇ ನಾವು ಹಿಂದೆ ಜಗದೀಶ್ ಶೆಟ್ಟರ್ ಅವರು ಮುಖ್ಯಮಂತ್ರಿಗಳಿದ್ದಾಗ 43 ತಾಲ್ಲೂಕುಗಳನ್ನು ಮಾಡಿದ್ದಾರೆ, ಘೋಷಣೆ ಮಾಡಬೇಕೆಂದು ಅದಕ್ಕೆ ನಾವು ಬದ್ಧರಾಗಿದ್ದೇವೆ. ಇನ್ನು ಮುಂದೆ ಯಾವುದೇ ಹೊಸ ತಾಲ್ಲೂಕನ್ನು ಮಾಡುವಾಗ ಒಂದು ಸಮಿತಿ ರಚನೆ ಮಾಡಿ ವರದಿ ತೆಗೆದುಕೊಳ್ಳಬೇಕು, ಅದಾದ ನಂತರ ಮಾಡಬೇಕು. ಅದರಲ್ಲಿ ತಾವೇನು ಮಾಯಕೊಂಡವನ್ನು ಕೇಳಿದ್ದೀರಿ, ಅದನ್ನೂ ಕೂಡ ಪರಿಶೀಲನೆ ಮಾಡುತ್ತೇವೆ.

ವಿಷಯ: ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯಲ್ಲಿ ಪಶು ಸಂಗೋಪನಾ ಡಿಪ್ಲೊಮಾ ವಿದ್ಯಾರ್ಥಿಗಳನ್ನು ತಾಂತ್ರಿಕ ಸಿಬ್ಬಂದಿಯಾಗಿ ಗಣನೆಗೆ ತೆಗೆದುಕೊಳ್ಳುವ ಬಗ್ಗೆ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಪಶುಸಂಗೋಪನಾ ಡಿಪ್ಲೋಮಾ ವಿದ್ಯಾರ್ಥಿಗಳು ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸಿನ ಮೊದಲನೇ ವರ್ಷದಲ್ಲಿ ಪಠ್ಯಕ್ರಮವನ್ನು ಅಭ್ಯಾಸ ಮಾಡಿದ್ದು, ದ್ವಿತೀಯ ವರ್ಷದಲ್ಲಿ ಕೆಲಸದ ಅನುಭವ ಸಲುವಾಗಿ ಪಶುಸಂಗೋಪನಾ ಇಲಾಖೆಯ ಜಿಲ್ಲಾ ಪಶು ಆಸ್ಪತ್ರೆ, ತಾಲ್ಲೂಕು ಪಶು ಆಸ್ಪತ್ರೆ, ಕೆ.ಎಂ.ಎಫ್ ಕೇಂದ್ರಗಳಲ್ಲಿ ಹಾಗೂ ಪಶುವೈದ್ಯಕೀಯ ಪ್ರಯೋಗಾಲಯದಲ್ಲಿ ವಿವಿಧ ಪ್ರಯೋಗಗಳ ಬಗ್ಗೆ ಅಧ್ಯಯನವನ್ನು ಮಾಡಿ, ಅನುಭವ ಗಳಿಸಿರುವ ಹಿನ್ನೆಲೆಯಲ್ಲಿ ಇಲಾಖೆಯಲ್ಲಿ ಪಶುಸಂಗೋಪನೆ ಡಿಪ್ಲೋಮಾ ವಿದ್ಯಾರ್ಥಿಗಳನ್ನು ತಾಂತ್ರಿಕ ಸಿಬ್ಬಂದಿಯಾಗಿ ಗಣನೆಗೆ ತೆಗೆದುಕೊಳ್ಳುವ ಬಗ್ಗೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.